ಹೆರಿಗೆಯಾದಾಗ ಬಾರದಿದ್ದುದಕ್ಕೆ ಚೆನ್ನಾಗಿ ವ್ಯಂಗ್ಯವಾಡಬೇಕೆಂದು ಏನೇನೋ ಹಗಲು ಗನಸುಗಳ ಗಗನ ಮಹಲುಗಳನ್ನು ಕಟ್ಟಿಕೊಂಡು ಬಂದಿದ್ದಳು. ಸ್ಟೇಷನ್ನಿನ ಬಳಿಯೇ ತನ್ನ ಗಂಡನ ಮುಖಾರವಿಂದವು ತಪ್ಪದೇ ಕಣ್ಣಿಗೆ ಹಬ್ಬವಾಗುವುದೆಂಬುದು ಅವಳ ದೃಢ ನಂಬಿಕೆಯಾಗಿತ್ತು. ರೈಲಿನಿಂದಿಳಿದ ಕೂಡಲೇ ಪ್ಲಾಟ್‌ಫಾರಮ್ಮಿನಲ್ಲೆಲ್ಲ ಅರಸಿದಳು. ಅವಳ ಹೃದಯಾಕಾಶದಲ್ಲಿ ಕಿರು ಮೋಡಗಳು ಆವರಿಸಿದವು.

## 3

ಅಂದು ವಿದೇಶಿ ವಸ್ತ್ರಗಳ ದುಕಾನಿನ ಬಳಿ ತೀವ್ರ ಪಿಕೆಟಿಂಗ್ ನಡೆಸಿದ್ದರಿಂದ ದಣಿದು ಮಧ್ಯಾಹ್ನ ಹನ್ನೆರಡು ಗಂಟೆಗೆ ಗೋಪಾಲರಾಯ ಮನೆಗೆ ಬಂದ. ಕೆಲಸದ ಒತ್ತಡದಲ್ಲಿ ಮಡದಿಯ ಆಗಮನವನ್ನು ಮರೆತಿದ್ದ ಗೋಪಾಲರಾಯ, ಹೆಂಡತಿಯನ್ನು ಕಂಡು 'ಹೌದು, ಈ ದಿನ ಬರುವೆನೆಂದು ಬರೆದಿದ್ದರಲ್ಲವೆ?' ಎಂದು ನೆನಪಿಗೆ ತಂದುಕೊಂಡ. ಪತ್ರ ಬರೆಯದೆ ಹೋದರೇನು, ರೈಲಿನ ಬಳಿಗೆ ಬಾರದಿದ್ದರೇನು? ತನ್ನನ್ನು ಕಂಡಾಗ ಉಲ್ಲಾಸದಿಂದ ಮಾತನಾಡಿಸದ್ದು ರುಕ್ಮಿಣಿ ಊಹಿಸದ ಆಪತ್ತು. ಆಗ ರುಕ್ಮಿಣಿ ಧರಿಸಿದ್ದ ಸೀರೆ ಆರ್ಟ್ ಸಿಲ್ಕಿನದು, ರವಿಕೆ ಗ್ಲಾಸ್ಕೋಮಲ್ಲಿನದು. ಅವಳು ಮಗನಿಗೆ ಹಾಕಿದ್ದುದು ಸಹ ವಿದೇಶದ ಬಟ್ಟೆಗಳನ್ನೇ. ಗೋಪಾಲರಾಯನ ಕಣ್ಣುಗಳಲ್ಲಿ ಕೋಪ, ಅಸಹ್ಯ ನರ್ತಿಸಿದವು. ಮಧುರ ಮಂದಹಾಸವಿಲ್ಲ, ಮನೋಜ್ಞ ಮಾತುಗಳಿಲ್ಲ. ಆತುರದಿಂದ ನಾಲ್ಕು ಅಗುಳು ಬಾಯಿಗಿಟ್ಟು ಹೊರಟು ಹೋದ. ಗಂಡನ ನಡವಳಿಕೆ ರುಕ್ಮಿಣಿಗೆ ಸಿಡಿಲು ಬಡಿದಂತಾಯಿತು. ಹಸಿರು ಸೀಬೆಕಾಯಿಯಂತೆ ಮಿರುಗುಟ್ಟುತ್ತ, ನಗುತ್ತ, ಕೇಕೆ ಹಾಕುತ್ತ, ಉ, ಅ ಅನ್ನುತ್ತ, ಕರಿಮುಂಗುರುಳು ಮುಖದ ಮೇಲೆ ಹರಡಿರಲು ನೋಡಿದವರನ್ನೆಲ್ಲ ಮುದ್ದಿನೌತಣಕ್ಕೆ ಆಹ್ವಾನಿಸುವ ಹಾಲ್ಗೆನ್ನೆಯೊಪ್ಪುವ ಮಗನನ್ನು ಕೆಳಗಿಳಿಸದೆ ಎತ್ತಿಕೊಳ್ಳುವನೆಂದುಕೊಂಡ ಗಂಡ ತೋರಿದ ಉದಾಸೀನಕ್ಕೆ ಕಾರಣ ಅವಳಿಗೆ ತಿಳಿಯಲಿಲ್ಲ. ವೇಷವೇ ಬದಲಾಗಿತ್ತು, ಭಾಷೆಯೇ ಬದಲಾಗಿತ್ತು. ಮನುಷ್ಯನೇ ಬದಲಾಗಿದ್ದ. ಈ ಪರಿಣಾಮಕ್ಕೆ ಕಾರಣವೇನೋ ರಾತ್ರಿಗೆ ತಿಳಿದು ಕೊಳ್ಳಲೇಬೇಕು. ಮುಳುಗುವುದಕ್ಕಾಗಿ ಸೂರ್ಯನತ್ತ ನೋಡುತ್ತಿದ್ದಳು ರುಕ್ಮಿಣಿ. ಅಂದು ಅವಳು ಅನ್ನವನ್ನು ಮುಂದಿನ ಹಲ್ಲುಗಳಿಂದ ಕಚ್ಚಿದಳು. ತಾಯಿಯ ಕಳವಳಕ್ಕೆ ಸರಿಯಾಗಿ ಮಗು ದಿನವೆಲ್ಲಾ ರಚ್ಚೆ ಹಿಡಿದು ಅಳುತ್ತಲೇ ಇತ್ತು.

## 4

ರಾತ್ರಿ ಹತ್ತು ಗಂಟೆಗೆ ಮನೆಗೆ ಬಂದು ಗೋಪಾಲ ರಾಯ ಅಂಗಿ ಬಿಚ್ಚುತ್ತಿದ್ದ. ಪೋಲಿಸ್ ಸಬ್ ಇನ್‌ಸ್ಪೆಕ್ಟರ್ ಬಂದು, 'ಗೋಪಾಲರಾಯರೇ' ಅಂದ. ಕೂಡಲೇ ಗೋಪಾಲರಾಯ, 'ಯಾರು?' ಅನ್ನುತ್ತ ಬಾಗಿಲಿಗೆ ಬಂದ. 'ಗೋಪಾಲರಾಯರು ನೀವೇನಾ?' ಎಂದು ವಾರೆಂಟು ಜಾರಿ ಮಾಡಿದ ಇನ್‌ಸ್ಪೆಕ್ಟರ್. ಗೋಪಾಲರಾಯ ನಿಶ್ಚಲನಾಗಿ ನಿಂತ. ಅವನ ಮುಖ ಸೀಮೆಯ ಮೇಲೆ ಎಂತಹ ವಿಕಾರವೂ ಕಾಣಿಸಲಿಲ್ಲ.

'ಒಂದು ಗಂಟೆ ಸಮಯ ಕೊಡುವಿರಾ?' ಅಂದ. 'ಸಾಧ್ಯವಾಗದು' – 'ಊಟ ಮಾಡಿಯಾದರೂ ಬರ ಬಹುದೇ?' – 'ಆದೇಶವಿಲ್ಲ.' –'ಸರಿ, ರೆಡಿ' ಎಂದು ಗೋಪಾಲರಾಯ ಇನ್‌ಸ್ಪೆಕ್ಟರ್‌ನ ಹಿಂದೆ ನಡೆದ.

## 5

ತಾಳ್ಮೆ ಇದ್ದ ಮ್ಯಾಜಿಸ್ಟ್ರೇಟು ಆ ರಾತ್ರಿ ವೇಳೆಯಲ್ಲಿಯೂ ಕೋರ್ಟಿನಲ್ಲಿಯೇ ಕುಳಿತಿದ್ದ. ಸಂಬಳ ಸಾಮಾನ್ಯವೇ ಆದರೂ ಆಗ ನ್ಯಾಯಾಧಿಕಾರಿಗಳಿಗೆ ಕೆಲಸ ಮಾತ್ರ ದುಪ್ಪಟ್ಟು. ಹಟ ತೊಟ್ಟ ಪ್ರಚಾರಕರನ್ನು ಎಷ್ಟು ಬೇಗ ಊರಿನಿಂದ ಅಟ್ಟಿದರಷ್ಟು ಹಾಯಾಗಿ ನಿದ್ದೆ ಮಾಡಬಹುದೆಂದು ಅಧಿಕಾರಿಗಳ ಊಹೆ. ಗೋಪಾಲರಾಯ, ಇನ್‌ಸ್ಪೆಕ್ಟರ್ ಮುಂದೆ, ಅವರ ಹಿಂದೆ ಇಬ್ಬರು ರಕ್ಷಕಭಟರು. ಮ್ಯಾಜಿಸ್ಟ್ರೇಟು ಗೋಪಾಲರಾಯನನ್ನು ನೋಡಿ, 'ಏನಯ್ಯಾ, ವಿದೇಶಿ ವಸ್ತ್ರಗಳನ್ನು ಧರಿಸಬಾರದೆಂದು ಜನರಲ್ಲಿ ತೀವ್ರ ಪ್ರಚಾರ ಮಾಡುತ್ತಿರುವೆಯಂತಲ್ಲ?' – 'ಹೌದು.'

'ವಿದೇಶಿ ವಸ್ತ್ರಗಳನ್ನು ಸುಟ್ಟು ಹಾಕಬೇಕೆಂದೆಯಂತೆ ಹೌದೇ?', 'ನಿಜವೇ?'